

# ಶಾಪ ವಿಮೋಚನೆಯ ಹಂಬಲದಲ್ಲಿ ಅಭಿಜ್ಞಾನದ ಹುಡುಕಾಟ



ಧಾವಂತ, ಸಣ್ಣ ಕುಟುಂಬದ ಅನುಕೂಲಗಳು, ಪರಸ್ಪರ ಅಪನಂಬಿಕೆ, ಸ್ವಹಿತಾಸಕ್ತಿ, ಸಂಬಂಧಗಳ ನಾಜೂಕುತನ. ಇನ್ನೊಂದು ಬದಿಯಲ್ಲಿ – ಸಾವಧಾನ, ವಿವೇಕ, ಅಂತಃಕರಣ, ಕೂಡಿ ಬಾಳುವುದರ ಸುಖ, ನಂಬಿಕೆ, ಸಾರ್ವಜನಿಕ ಹಿತ. ಈ ಎರಡರಲ್ಲಿ ನಮ್ಮ ಆಯ್ಕೆ ಯಾವುದಾಗಿರಬೇಕು? ಈ ಪ್ರಶ್ನೆಗೆ ನಮ್ಮನ್ನು ಮುಖಾಮುಖಿಯಾಗಿಸುವ ಸಿನಿಮಾ ‘ಅಸ್ತು’.

ಸುಮಿತ್ರಾ ಭಾವೆ ಹಾಗೂ ಸುನಿಲ್ ಸುಖ್ತಂಕರ್ ನಿರ್ದೇಶನದ ಮರಾಠಿ ಸಿನಿಮಾ ‘ಅಸ್ತು’ ರಾಷ್ಟ್ರೀಯ, ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಗೌರವ ಪಡೆದಿರುವ ಕಲಾಕೃತಿ. 2013ರಲ್ಲಿ ಸಂಭಾಷಣೆ (ಸುಮಿತ್ರಾ ಭಾವೆ) ಹಾಗೂ ಪೋಷಕ ಪಾತ್ರ (ಅಮೃತಾ ಸುಭಾಷ್) ನಿರ್ವಹಣೆಗಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದ ಈ ಸಿನಿಮಾ, ಮಹಾರಾಷ್ಟ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ತೆರೆಕಂಡಿದ್ದು 2016ರಲ್ಲಿ. ಈ ಮೂರು ವರ್ಷಗಳುದ್ದಕ್ಕೂ ‘ಅಸ್ತು’ ಸಹೃದಯರ ನಡುವೆ ಸುದ್ದಿ ಮಾಡುತ್ತಲೇ ಇದೆ. ಕಳೆದ ವರ್ಷ ತೆರೆಕಂಡ ಕನ್ನಡದ, ಹೇಮಂತ್ ಎಂ. ರಾವ್ ನಿರ್ದೇಶನದ ‘ಗೋಧಿ ಬಣ್ಣ ಸಾಧಾರಣ ಮೈಕಟ್ಟು’ ಚಿತ್ರಕಥೆಯಲ್ಲಿ ಕೂಡ ‘ಅಸ್ತು’ವಿನ ಪ್ರೇರಣೆಯನ್ನು ಕಾಣಬಹುದು.

ಡಾ. ಚಕ್ರಪಾಣಿ ಶಾಸ್ತ್ರಿ ಎನ್ನುವ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು ‘ಅಸ್ತು’ವಿನ ಕೇಂದ್ರಬಿಂದು. ಅಲ್ಜಮೈರ್(ಮರೆವಿನ) ಕಾಯಿಲೆಯಿಂದ ಬಳಲುತ್ತಿರುವ ಶಾಸ್ತ್ರಿಗಳಿಗೆ ಭೂತಕಾಲದ ಹಂಗಿಲ್ಲ. ಗೋಡೆಯ ಮೇಲೆ ಅವರ ಕುಟುಂಬದ